ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ಆರ್ಥಿಕ ಇಲಾಖೆ ಅಡಿಯಲ್ಲಿರುವ ಲೆಕ್ಕಶೀರ್ಷಿಕೆಗಳ ಬಗ್ಗೆ

ಶ್ರೀ ಕಾಂತರಾಜು(ಬಿಎಂಎಲ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

468 (693) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಲೆಕ್ಕ ಶೀರ್ಷಿಕೆಗಳು ಅಂದರೇನು; ಇವುಗಳಲ್ಲಿ ಎಷ್ಟು ವಿಧ; ಅವು ಯಾವುವು; ಬ್ರಿಟೀಷರ ಕಾಲದಿಂದ ಇವುಗಳ ಇತಿಹಾಸವೇನು; (ವಿವರವಾದ ಮಾಹಿತಿ ನೀಡುವುದು)

(ಆ) ರಾಜ್ಯ ಸರ್ಕಾರದ ಆರ್ಥಿಕ ಇಲಾಖೆ ಅಡಿಯಲ್ಲಿ ಎಷ್ಟು ಲೆಕ್ಕ ಶೀರ್ಷಿಕೆಗಳಿವೆ; ಅವುಗಳ ವಿಧಗಳಾವುವು; (ವಿವರವಾಗಿ ಇಲಾಖಾವಾರು ಮಾಹಿತಿ ನೀಡುವುದು)

(ಇ) ಆರ್ಥಿಕ ಇಲಾಖೆಯ ಅಧೀನದಲ್ಲಿ ಬರುವ ಜೀ-ಹೂಜೂರು ಖಜಾನೆಯನ್ನು ಯಾವಾಗಿನಿಂದ ಪ್ರಾರಂಭಿಸಲಾಯಿತು ಹಾಗೂ ಇದರ ಇತಿಹಾಸವೇನು; ಇದರ ಕರ್ತವ್ಯ ಹಾಗೂ ಧ್ಯೇಯೋದ್ದೇಶಗಳೇನು;

(ಈ) 2018-2019 ಹಾಗೂ 2019-2020ನೇ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಯಾವ ಯಾವ ಯೋಜನೆಗಳಡಿ ಯಾವ ಯಾವ ಲೆಕ್ಕ ಶೀರ್ಷಿಕೆಗಳ ಅಡಿ ಎಷ್ಟು ಹಣ ಬಿಡುಗಡೆ ಆಗಿದೆ? (ವಿವರವಾದ ಮಾಹಿತಿ ನೀಡುವುದು)